
## ನಾಂದಿಪದ

# ಮಾತಿನ ಮಂಟಪ

ಮೊಬೈಲೇ ಲೋಕವಾಗಿರುವ, ಅಂತರ್ಜಾಲವೇ ನಮ್ಮನ್ನು ಹೊರ ಜಗತ್ತಿನೊಂದಿಗೆ ಬೆಸೆವ ತಂತುವಾಗಿರುವ ಕಾಲವಿದು. ಅನಿವಾರ್ಯವಾದ ನಮ್ಮ ಕೆಲವು ಕ್ರಿಯೆಗಳ ಹೊರತಾಗಿ ಉಳಿದೆಲ್ಲವೂ ಮೊಬೈಲಿನ ಪುಟ್ಟ ಕಿಟಕಿಯಲ್ಲೇ ಮುಗಿಯುತ್ತಿವೆ. ಅದೀಗ ಬಿಟ್ಟೆನೆಂದರೂ ಬಿಡಲಾಗದ ಮಾಯೆಯಂತೆ ನಮ್ಮನ್ನು ಆವರಿಸಿದೆ. ಈ ಸಾಮಾಜಿಕ ಜಾಲತಾಣಗಳು ಮನುಷ್ಯನ ಆಳದಲ್ಲಿರಬಹುದಾದ ಅತೃಪ್ತಿ, ಆಶೆ, ಅಹಂಕಾರವನ್ನು ತಣಿಸಲು ಒದಗಿ ಬಂದಂತಿವೆ. ಈಗ ಬಂದಿರುವ 'ಕ್ಲಬ್‌ಹೌಸ್' ಎಂಬ ಧ್ವನಿ ಆಧಾರಿತ ಸಾಮಾಜಿಕ ಜಾಲತಾಣ ಮಾತಿನಲ್ಲೇ ಮಂಟಪ ಕಟ್ಟುವ ಜಾಣ ಜಾಣೆಯರ ವೇದಿಕೆಯಾಗುತ್ತಿದೆ. ಇಲ್ಲಿ ಸಂವಾದ, ಭಾಷಣ, ವಿಚಾರ ಸಂಕಿರಣ, ಸಂಗೀತ ಕಛೇರಿ, ಕವಿತೆಯ ವಾಚನಗಳು ಸಾಧ್ಯ. ಗಂಭೀರವಾದ ವಿಚಾರ ವಿನಿಮಯಕ್ಕೆ ಇಲ್ಲಿ ದೊಡ್ಡ ಅವಕಾಶವಿದೆ. ಯಾರಿಗೂ ಮುಖಾಮುಖಿಯಾಗದೆ ಚರ್ಚಿಸಲು, ಬೈದಾಡಿಕೊಳ್ಳಲು, ವಿಚಾರಗಳನ್ನು ಹಂಚಿಕೊಳ್ಳಲು ಸಾಕಷ್ಟು ವೇದಿಕೆಗಳು ಈ ಡಿಜಿಟಲ್ ಯುಗದಲ್ಲಿ ತೆರೆದುಕೊಳ್ಳುತ್ತಿವೆ.



ಕಲೆ: ಈಶ್ವರ ಬಡಿಗೇರ

ಮನುಷ್ಯನ ಆಸಕ್ತಿ ಅಕ್ಷರ ಮಾಧ್ಯಮದಿಂದ ದೃಶ್ಯ, ಶ್ರವಣ ಮಾಧ್ಯಮಗಳಿಗೆ ಪಲ್ಲಟಗೊಂಡಿದೆ. ಮತ್ತು ಅವನ ಏಕಾಗ್ರತೆಯ ಪರಿಧಿ ಕಿರಿದಾಗುತ್ತ, ಮೆದುಳು ಅಲ್ಲಲ್ಲಿ ಸ್ಪರ್ಶಿಸಿ ಬಿಟ್ಟ ಸಂಗತಿಗಳಿಂದ ಕಲಸುಮೇಲೋಗರವಾಗುತ್ತಿದೆ. ಸಂವಾದಕ್ಕೆ ಮುಕ್ತವಾಗಿರುವ ಇವುಗಳಲ್ಲಿ ಗೈರುಹಾಜರಾಗಿರುವುದು ಮನುಷ್ಯ ಪ್ರೀತಿ, ಅಂತಃಕರಣಗಳು ಮಾತ್ರ. ಜೊತೆಗೆ, ಇವು ವಿಚಾರಗಳ, ಜ್ಞಾನದ ಸನಿಹಕ್ಕೆ ನಮ್ಮನ್ನು ತರುತ್ತಿಲ್ಲ ಮತ್ತು ಜಗತ್ತಿನಿಂದ, ಮನುಷ್ಯರಿಂದಲೂ ದೂರ ಇಡುತ್ತಿವೆ. ಪ್ರತ್ಯೇಕತೆಯೇ ಅವುಗಳ ನಿಜವಾದ ಸ್ವರೂಪ, ಜೀವಾಳ. ಅದರಲ್ಲೇ ಅವುಗಳಿಗೆ ಲಾಭವಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಬಳಕೆಯಾಗುವುದು ನಮ್ಮ ನಿತ್ಯದ ವ್ಯಾವಹಾರಿಕ ಭಾಷೆ. ಭಾಷೆಯ ಬಳಕೆಗೆ ಇಲ್ಲಿ ಅಪರಿಮಿತ ಸಾಧ್ಯತೆಗಳಿವೆ. ಹಾಗೆಂದು ಭಾಷೆ, ಸಾಹಿತ್ಯ ಇದರಿಂದ ಬೆಳೆಯುತ್ತದೆ ಎಂದು ಹೇಳಲಾಗದು. ಭಾಷೆಯ ಬಳಕೆಗೆ, ಸಾಹಿತ್ಯದ ತಲುಪುವಿಕೆಗೆ ಅವಕಾಶಗಳು ಒಂದಷ್ಟು ಹೆಚ್ಚಬಹುದಷ್ಟೆ. ಭಾಷೆ, ಸಾಹಿತ್ಯ ಬೆಳೆಯುವುದು ಮನುಷ್ಯರೊಂದಿಗಿನ ನೇರ ಸಂಪರ್ಕದಿಂದ, ನಿರಂತರ ಬಳಕೆಯಿಂದ. ಅಂತರ್ಜಾಲದಲ್ಲಿ ಹೂತು ಹೋಗುವ ಭಾಷೆಯ ಬಳಕೆಯಿಂದ ಯಾವುದೇ ನುಡಿಗೆ ಹೆಚ್ಚಿನ ಉಪಯೋಗವಿಲ್ಲ. ಮನಸಿನ ಕಿಟಕಿ ಬಾಗಿಲುಗಳನ್ನು ಹಾಕಿ, ಕೋಣೆಯ ನಡುವೆ ತೊಡಗುವ ಇಂತಹ ವೇದಿಕೆಗಳಲ್ಲಿ ಭಾಷೆ ಬೆಳೆಯಲಾರದು. ಅದು ಬೆಳೆಯುವುದು ಬೀದಿಗಳಲ್ಲಿ, ಸಂತೆಯ ವ್ಯಾಪಾರದಲ್ಲಿ.

ನಮ್ಮ ಚಿಂತನಶೀಲರು, ಸಾಹಿತ್ಯದ ವಿದ್ಯಾರ್ಥಿಗಳು, ಕಲಾವಿದರು, ಲೇಖಕರು ಎಲ್ಲ ಬಗೆಯ ಸಾಮಾಜಿಕ ಜಾಲತಾಣಗಳಲ್ಲಿ ಹುರುಪಿನಿಂದ ಮಗ್ನರಾಗಿದ್ದಾರೆ. ಅವರು ಕಟ್ಟುವ ಕ್ಷಣಭಂಗುರವಾದ ಮಾತಿನ ಮನೆಗಳು ಅಲ್ಲೆಲ್ಲ ಕ್ಷಣ ಕ್ಷಣಕ್ಕೂ ನಿರ್ಮಾಣವಾಗುತ್ತಿವೆ. ಮರುಕ್ಷಣದಲ್ಲೇ ಉರುಳಿ ಬೀಳುತ್ತಲೂ ಇರುತ್ತವೆ. ಅವುಗಳಿಂದ ಯಾರಿಗೆ ಯಾವ ಬಗೆಯ ಉಪಯೋಗವಾಯಿತು, ಓದುಗರ ಮತ್ತು ಕೇಳುಗರ ಭಾವಕೋಶಗಳಿಗೆ, ಅನುಭವಕ್ಕೆ ಏನು ದಕ್ಕಿತು ಎಂಬುದರ ಲೆಕ್ಕವನ್ನು ಯಾರೂ ಇಟ್ಟಿಲ್ಲ. ಅಂದಹಾಗೆ, ಬದುಕಿನಲ್ಲಿ ಈ ಕ್ಷಣವಷ್ಟೇ ಸತ್ಯ ಎಂಬುದನ್ನು ಈ ಸಾಮಾಜಿಕ ಜಾಲತಾಣಗಳು ಮತ್ತು ಅವುಗಳಲ್ಲಿ ತೊಡಗಿರುವವರ ಕ್ರಿಯೆಗಳು ಸೂಚಿಸುತ್ತಿರಬಹುದೆ?

**ಸಂದೀಪ ನಾಯಕ**